# ಓ ಮೋಡವೆ ನಿಂತು ಸಾಗು

■ ವನರಾಗ ಶರ್ಮಾ

ಮೋಡವೆ ಮೋಡವೆ ಎಲ್ಲಿಗೆ ಓಡುವೆ
ನೋಡುವೆ ಮರೆಯಲಿ ಚಂದ್ರನನು
ನಿನ್ನಯ ಒಡಲಲಿ ನೀರನು ತುಂಬಿ
ಮೆಲ್ಲನೆ ತೋಯಿಸೊ ಭೂಮಿಯನು
ಒಮ್ಮೆಲೆ ಧಬಧಬ ಹೊಯ್ಯುತ ನೆರೆಯಲಿ
ಮುಳುಗಿಸ ಬೇಡ ಊರುಗಳ
ಸುರಿಸದೆ ಮಳೆಯನು ಬರದಲಿ ಸುಡಿಸದೆ
ಕಾಪಿಡು ಹೊಲ ಬೆಳೆ ಸೂರುಗಳ
ಸಾಗಿವೆ ಚಂದದ ಬಣ್ಣದ ಹಲವಿಧ
ಹಾರುವ ಹಕ್ಕಿಯ ಸಾಲುಗಳು
ನಲಿದಿವೆ ಹಸಿರಿನ ಕಾಡಲಿ ನರಿ– ಮೊಲ
ಹುಲಿ–ಗಿಳಿ – ಜಿಂಕೆ ನವಿಲುಗಳು

ಮರದಲಿ ಮಂಗ ಬಿಲದಲಿ ಮುಂಗುಸಿ
ಹೊಳೆಯಲಿ ಮೀಯುವ ಆನೆಗಳು
ಪರ್ವತ ಕಣಿವೆ ಹಾವು ಕಪ್ಪೆ
ದನಕರು ಗಿಡಮರ ಬಳ್ಳಿಗಳು
ಎಲ್ಲರು ನಿನ್ನಯ ಬರವಿಗೆ ಕಾಯುತ
ಲಿರುವರು ರೈತರು ಸಹವಾಗಿ
ಓ ಮಳೆರಾಯ ಮಾಡದೆ ಹಾನಿಯ
ಸುರಿಸೊ ತಣಿವೊಲು ತುಸುಬಾಗಿ
ಸೂರ್ಯನ ಮುಸುಕಿ ಕಪ್ಪನು ಹಾಸಿ
ಕಣ್ಮರೆಯಾಗುವೆ ಎದುರಿನಲೆ
'ಕಣ್ಣಾ ಮುಚ್ಚೆ ಕಾಡಾ ಗೂಡೆ'
ಹಾಡುತಲಾಡುವೆ ಹುಡುಕುತಲೆ ■



# ಯಾವುದು ಬಲಶಾಲಿ

■ ಮುರಲೀಧರ ಕುಲಕರ್ಣಿ

ಒಮ್ಮೆ ಗೌತಮಬುದ್ಧರು ತಮ್ಮ ಶಿಷ್ಯರೊಂದಿಗೆ ಪ್ರವಾಸ ಹೊರಟಿದ್ದರು. ಅವರು ಒಂದು ವಿಶಾಲವಾದ ಮರದ ನೆರಳಿನಲ್ಲಿ ಕುಳಿತು ವಿಶ್ರಾಂತಿ ಪಡೆಯುತಿದ್ದಾಗ ಎದುರಿನಲ್ಲಿ ಒಂದು ಬೆಟ್ಟ ಕಾಣುತ್ತಿತ್ತು. ಆ ಬೆಟ್ಟದಲ್ಲಿ ಒಂದು ದೊಡ್ಡ ಬಂಡೆಗಲ್ಲು ಇತ್ತು. ಗೌತಮ ಬುದ್ಧನ ಒಬ್ಬ ಶಿಷ್ಯನು ಆ ಬಂಡೆಯನ್ನು ತೋರಿಸಿ 'ಪೂಜ್ಯರೆ ಆ ಬಂಡೆಗಲ್ಲಿಗಿಂತ ಕಠಿಣವಾದ ಇನ್ನೊಂದು ವಸ್ತು ಇದೆಯೇ?' ಎಂದು ಕೇಳಿದನು. ಅದಕ್ಕೆ ಗೌತಮ ಬುದ್ಧರು 'ಏಕಿಲ್ಲ ಉಕ್ಕು ಆ ಬಂಡೆಗಲ್ಲಿಗಿಂತ ಗಟ್ಟಿಯಾದುದು ಉಕ್ಕಿನಿಂದ ತೈಯಾರಿಸಿದ ಒಂದು ಸುತ್ತಿಗೆಯಿಂದ ಆ ಬಂಡೆಗಲ್ಲನ್ನು ಕುಟ್ಟಿ ಪುಡಿ ಪುಡಿ ಮಾಡಬಹುದು' ಎಂದು ಹೇಳಿದರು.

ಹಾಗಾದರೆ ಉಕ್ಕೇ ಈ ಭೂಮಿಯ ಮೇಲಿರುವ ಅತ್ಯಂತ ಗಟ್ಟಿಯಾದ ಪದಾರ್ಥವೇ? ಎಂದು ಶಿಷ್ಯ ಕೇಳಿದ.

'ಇಲ್ಲ ಬೆಂಕಿ ಉಕ್ಕಿಗಿಂತ ಹೆಚ್ಚು ಬಲಶಾಲಿ, ಅದರ ಶಾಖವು ಉಕ್ಕನ್ನು ಕರಗಿಸಿ ದ್ರವವನ್ನಾಗಿ ಮಾಡಬಲ್ಲದು. ಅಗ್ನಿಯು ಭೂಮಿಯ ಮೇಲಿರುವ ಸಕಲ ವಸ್ತುಗಳನ್ನು ದಹಿಸಿ ಬೂದಿಯನ್ನಾಗಿ ಮಾಡಬಲ್ಲದು. ಕಾಡುಗಳನ್ನು ಕ್ಷಣಾರ್ಧದಲ್ಲಿ ದಹಿಸಿಬಿಡಬಲ್ಲದು'. ಎಂದು ಬುದ್ಧರು ಹೇಳಿದರು.

'ಹಾಗಾದರೆ ಅಗ್ನಿಯ ಎದುರಿಗೆ ಯಾರ ಆಟವೂ ನಡೆಯುವುದಿಲ್ಲ ಎಂದಾಯಿತು' ಎಂದ ಶಿಷ್ಯ.

'ತಪ್ಪು, ನೀರು ಅಗ್ನಿಗಿಂತಲೂ ಶ್ರೇಷ್ಠವಾದುದು. ನೀರು ಅಗ್ನಿಯ ಉಷ್ಣತೆಯನ್ನು ತಗ್ಗಿಸಬಲ್ಲದು. ಎಂತಹಜ್ವಾಲೆಯನ್ನಾದರೂಅದುನಂದಿಸಬಲ್ಲದು. ನೀರಿನ ಶಕ್ತಿ ಅಪಾರವಾದದ್ದು. ನದಿಗಳಿಗೆ ಪ್ರವಾಹ ಬಂದಾಗ ಮನೆಗಳು ಜನ ಜಾನುವಾರುಗಳು ಅದರಲ್ಲಿ ಕೊಚ್ಚಿಕೊಂಡು ಹೋಗುವವು. ಹತ್ತಾರು ಜನರು ಎತ್ತಲಾರದಷ್ಟು ಭಾರವಾದ ಮರದ ದಿಮ್ಮಿಗಳನ್ನು ನೀರು ನಿರಾಯಾಸವಾಗಿ ಸಾಗಿಸಿಕೊಂಡು ಹೋಗಬಲ್ಲದು ಆದ್ದರಿಂದ ನೀರು ಹೆಚ್ಚು ಬಲಶಾಲಿಯಾದದ್ದು' ಎಂದು ಗೌತಮ ಬುದ್ಧರು ಹೇಳಿದರು.



'ಹಾಗಾದರೆ ನೀರೇ ಈ ಪ್ರಪಂಚದಲ್ಲಿ ಅತ್ಯಂತ ಬಲಶಾಲಿ ಪದಾರ್ಥವೆಂದಾಯಿತು' ಎಂದ ಶಿಷ್ಯ.

'ಈಗಲೇ ಯಾವುದೇ ನಿರ್ಧಾರಕ್ಕೆ ಬರಬೇಡ ಈ ಪ್ರಪಂಚದಲ್ಲಿ ಒಂದಕ್ಕಿಂತ ಒಂದು ಬಲಶಾಲಿಯಾದ ವಸ್ತುಗಳಿವೆ. ಗಾಳಿ, ಅಗ್ನಿ ಹಾಗು ನೀರಿಗಿಂತ ಬಲಶಾಲಿಯಾದುದು ಬಿರುಗಾಳಿ ಬೀಸಿದಾಗ ವಿಶಾಲವಾದ ವೃಕ್ಷಗಳು ಬೇರು ಸಮೇತ ಕಿತ್ತು ಬೀಳುತ್ತವೆ. ವಿಶಾಲವಾದ ಸಾಗರವನ್ನು ಕೂಡ ಅದು ತನ್ನ ತೆಕ್ಕೆಗೆ ತೆಗೆದುಕೊಳ್ಳಬಲ್ಲದು. ಸಾಗರದ ಮೇಲೆ ಬಿರುಗಾಳಿ ಬೀಸಿದಾಗ ಸಾಗರ ಅಲ್ಲೋಲ್ಲ ಕಲ್ಲೋಲವಾಗುತ್ತದೆ. ಆಗ ಸಾಗರದಲ್ಲಿ ಎತ್ತರವಾದ ಅಲೆಗಳು ಎದ್ದು ಅವು ಭೂಮಿಯತ್ತ ನುಗ್ಗಿಬಂದು ತುಂಬ ವಿನಾಶವನ್ನುಂಟುಮಾಡುತ್ತವೆ. ಇದಲ್ಲದೆ ವಾಯುವೇ ಈ ವಿಶ್ವದ ಸಕಲ ಪ್ರಾಣಿಪಕ್ಷಿಗಳನ್ನು ಜೀವಂತವಾಗಿಡುವ ಶಕ್ತಿಯನ್ನು ಹೊಂದಿದೆ. ವಾಯು ಇಲ್ಲದಿದ್ದರೆ ಈ ಭೂಮಿಯ ಮೇಲೆ ಯಾವ ಪ್ರಾಣಿ ಜೀವಿಯೂ ಬದುಕಿರಲಾರದು. ಎಲ್ಲ ಜೀವಿಗಳಿಗೆ ವಾಯುವೇ ಜೀವನಾಧಾರ. ಆದ್ದರಿಂದಲೇ ವಾಯುವನ್ನು ಪ್ರಾಣ ಎಂದು ಕರೆದಿದ್ದಾರೆ ಆದ್ದರಿಂದ ವಾಯು ಹೆಚ್ಚು ಬಲಶಾಲಿಯಾದದ್ದು' ಎಂದು ಗೌತಮ ಬುದ್ಧರು ಹೇಳಿದರು.

'ಹಾಗಾದರೆ ವಾಯುವೇ ಸಕಲ ಪ್ರಾಣಿಪಕ್ಷಿಗಳ ಜೀವನಾಧಾರವಾಗಿರುವುದರಿಂದ ಅದಕ್ಕಿಂತ ಶ್ರೇಷ್ಠವಾದದ್ದು ಈ ಜಗತ್ತಿನಲ್ಲಿ ಬೇರೇನಿರಲು ಸಾಧ್ಯ' ಎಂದ ಶಿಷ್ಯ.

'ಇದೆ ವತ್ಸ, ಮಾನವನ ಸಂಕಲ್ಪಶಕ್ತಿ ಇವೆಲ್ಲವುಗಳಿಂತಲೂ ಬಲಶಾಲಿಯಾದದ್ದು ಮಾನವ ತನ್ನ ಸಂಕಲ್ಪ ಶಕ್ತಿಯಿಂದ ಮೇಲಿನ ಎಲ್ಲ ಶಕ್ತಿಗಳನ್ನು ನಿಯಂತ್ರಿಸಬಲ್ಲ. ಆದ್ದರಿಂದ ಮಾನವನ ಸಂಕಲ್ಪಶಕ್ತಿಯೇ ಎಲ್ಲಕ್ಕಿಂತ ಶ್ರೇಷ್ಠವಾದುದ್ದು' ಗೌತಮ ಬುದ್ಧರು ಹೇಳಿದರು. ■